# ನಿಮ್ಮೊಡನೆ

## ಪ್ರತಿಭೆಯ ಜತೆಗೆ ತರಬೇತಿಯೂ ಬೇಕು

ಎರಡು ದೊಡ್ಡ ಕ್ರೀಡಾಕೂಟಗಳು ಮುಗಿದಿವೆ. ಎರಡೂ ಕ್ರೀಡಾಕೂಟಗಳ ಪದಕ ಪಟ್ಟಿಯಲ್ಲಿ ಭಾರತದ ಕ್ರೀಡಾಪಟುಗಳು 'ಸೈ' ಎನ್ನಿಸುವಂತಹ ಸಾಧನೆ ಮಾಡಿದ್ದಾರೆ. ಕಾಮನ್‌ವೆಲ್ತ್ ದೇಶಗಳ ಕ್ರೀಡಾಕೂಟದ ಪದಕಪಟ್ಟಿಯಲ್ಲಿ ಆಸ್ಟ್ರೇಲಿಯಾವನ್ನು ಬಿಟ್ಟರೆ ಭಾರತವೇ ಅತಿ ಹೆಚ್ಚು ಚಿನ್ನದ ಪದಕಗಳನ್ನು ಬಾಚಿಕೊಂಡಿದೆ. 38 ಚಿನ್ನಗಳನ್ನು ಗೆಲ್ಲುವ ಮೂಲಕ ಇಂಗ್ಲೆಂಡ್ ತಂಡವನ್ನೂ ಹಿಂದಿಕ್ಕಿದ ಭಾರತದ ಸಾಧನೆ ಗಮನಾರ್ಹವೇ ಸರಿ. ಹಾಗೆಯೇ ಏಷ್ಯನ್ ಕ್ರೀಡಾಕೂಟದಲ್ಲೂ ಭಾರತದ ಕ್ರೀಡಾಪಟುಗಳು, ಅತ್ಯಧಿಕ 556 ಪದಕಗಳನ್ನು ಕೊಳ್ಳೆ ಹೊಡೆಯುವ ಮೂಲಕ ಅಂತರರಾಷ್ಟ್ರೀಯ ಕ್ರೀಡಾರಂಗದಲ್ಲಿ ದೇಶದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಜಪಾನ್ (2658), ಚೀನಾ (2631) ಗಳಿಸಿರುವ ಪದಕಗಳ ಸಂಖ್ಯೆಗೆ ಹೋಲಿಸಿದರೆ ಭಾರತದ್ದು 'ಏನೇನೂ ಅಲ್ಲ' ಅನ್ನಬಹುದಾದರೂ, ಈ ಹಿಂದಿನ ಕ್ರೀಡಾಕೂಟಗಳಿಗೆ ಹೋಲಿಸಿದರೆ ನಮ್ಮ ಕ್ರೀಡಾಪಟುಗಳ ಸಾಧನೆಯ ತೂಕ ಹೆಚ್ಚೆಂದೇ ಹೇಳಬಹುದು. ಅದರಲ್ಲೂ ಕಾಮನ್‌ವೆಲ್ತ್ ಕ್ರೀಡಾಕೂಟದ ಅತಿಥೇಯರಾಗಿ ಕೂಟವನ್ನು ಯಶಸ್ವಿಯಾಗಿ ಸಂಘಟಿಸುವ ಬಗ್ಗೆ ಇದ್ದ ಸಂಶಯದ ಮೋಡಗಳು ದೂರವಾದದ್ದು ಗಮನಾರ್ಹ. ಬಹುಶಃ ಕ್ರೀಡಾಕೂಟದ ಮೂಲಸೌಲಭ್ಯ ನಿರ್ವಹಣೆಯಲ್ಲಿ ವ್ಯಾಪಕ ಭ್ರಷ್ಟಾಚಾರದ ವಾಸನೆ ಹೊಡೆದದ್ದು ಅಲ್ಲವಾದಲ್ಲಿ, ಭಾರತ ಎದೆ ತಟ್ಟಿ ಒಲಿಂಪಿಕ್ಸ್ ಆತಿಥ್ಯಕ್ಕೂ ಒಂದು ಕೈ ನೋಡಬಹುದಿತ್ತು.

ಏಷ್ಯನ್ ಗೇಮ್ಸ್ ಕೂಟದ ಪದಕಪಟ್ಟಿಯಲ್ಲಿ ಭಾರತದ ಸಾಧನೆಗಳನ್ನು ಜಪಾನ್, ಚೀನಾ ಮುಂತಾದ ಚಾಂಪಿಯನ್ ದೇಶಗಳ ಜತೆಗೆ ಹೋಲಿಸಿ ನೋಡಿದಾಗ ಒಂದು ಅಂಶ ಸ್ಪಷ್ಟವಾಗುತ್ತದೆ. ನಮ್ಮಲ್ಲಿ ಚಿನ್ನದ ಪದಕ ಗೆದ್ದವರಿಗಿಂತ, ಬೆಳ್ಳಿ ಮತ್ತು ಕಂಚು ಗೆದ್ದವರ ಸಂಖ್ಯೆ ಮೂರು ಪಟ್ಟು ಹೆಚ್ಚಿದೆ. ನಮ್ಮ 128 ಸ್ಪರ್ಧಿಗಳು ಚಿನ್ನ ಗೆದ್ದಿದ್ದರೆ, 168 ಕ್ರೀಡಾಳುಗಳು ಬೆಳ್ಳಿ ಮತ್ತು 260 ಕ್ರೀಡಾಳುಗಳು ಕಂಚು ಗೆದ್ದಿದ್ದಾರೆ. ಅದೇ ಚೀನಾದವರಲ್ಲಿ 1204 ಕ್ರೀಡಾಳುಗಳು ಚಿನ್ನ ಗೆದ್ದಿದ್ದು, ಬೆಳ್ಳಿ ಗೆದ್ದವರು 168 ಮತ್ತು ಕಂಚು ಗೆದ್ದವರು 260 ಮಂದಿಯಷ್ಟೇ. ಅಂದರೆ ಅಂತಿಮ ಹಂತದಲ್ಲಿ ನಮ್ಮ ಕ್ರೀಡಾಳುಗಳು ಸ್ವಲ್ಪದರಲ್ಲೇ ಚಿನ್ನ ತಪ್ಪಿಸಿಕೊಳ್ಳುತ್ತಿದ್ದಾರೆ. ಬಹುಶಃ ಇನ್ನಷ್ಟು ಕಠಿಣ ತರಬೇತಿ ಹಾಗೂ ಮೂಲಸೌಲಭ್ಯಗಳು ಸುಲಭದಲ್ಲಿ ದೊರೆತಲ್ಲಿ ನಮ್ಮವರ ಚಿನ್ನದ ಸಂಖ್ಯೆಯೂ ಹೆಚ್ಚಾದೀತು. ಪ್ರತಿಭೆಯ ಜತೆಗೆ ಕಠಿಣ ತರಬೇತಿಯಲ್ಲೂ ಚೀನಾ, ಜಪಾನ್ ಮುಂದಿರುವುದು ನಮಗೆ ಮಾದರಿ ಆಗಬೇಕು.

ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪರ ಪದಕ ಗೆದ್ದವರಲ್ಲಿ ಬಹುತೇಕರು ಹಳ್ಳಿಗಾಡಿನಿಂದ ಬಂದವರು ಎನ್ನುವುದು ಗಮನಾರ್ಹ. ಇವತ್ತಿಗೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರತಿಭಾವಂತರಿದ್ದಾರೆ. ಆದರೆ ಚಿಕ್ಕಂದಿನಲ್ಲೇ ಅವರನ್ನು ಕ್ರೀಡಾಪಟುಗಳನ್ನಾಗಿ ರೂಪಿಸುವ ಸಂಸ್ಥೆಗಳು ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲ. ಪಟ್ಟಣಗಳಿಗೆ ವಲಸೆ ಬರುವ ಸಾಮರ್ಥ್ಯ ಇದ್ದ ಕುಟುಂಬದವರು ಮಕ್ಕಳ ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸುತ್ತಾರೆ. ಆದರೆ ಉಳಿದವರು ಅಲ್ಲೇ ಉಳಿದುಬಿಡುತ್ತಾರೆ. ಏಷ್ಯನ್ ಗೇಮ್ಸ್‌ನಲ್ಲಿ ಕರ್ನಾಟಕದ ಮೂವರು ಹುಡುಗಿಯರು (ಅಶ್ವಿನಿ ಶೆಟ್ಟಿ, ಮಮತಾ ಪೂಜಾರಿ ಮತ್ತು ಪ್ರಮೀಳಾ ಅಯ್ಯಪ್ಪ) ಇಡೀ ರಾಜ್ಯವೇ ಹೆಮ್ಮೆ ಪಡುವಂತಹ ಸಾಧನೆ ಮಾಡಿದ್ದಾರೆ. ಸೂಕ್ಷ್ಮವಾಗಿ ಗಮನಿಸಿದರೆ ಈ ಕ್ರೀಡಾಪಟುಗಳು ತಮ್ಮ ಹೆಚ್ಚಿನ ಸಾಧನೆಗೆ ರಾಜ್ಯ ಸರಕಾರವನ್ನು ನೆಚ್ಚಿಕೊಂಡದ್ದು ಕಂಡು ಬರುವುದಿಲ್ಲ. ಜಾರ್ಖಂಡ್, ಹರಿಯಾಣ ಮುಂತಾದ ರಾಜ್ಯಗಳಲ್ಲಿ ಇರುವ ತರಬೇತಿಯ ಅತ್ಯುತ್ತಮ ಸೌಲಭ್ಯಗಳನ್ನು ಬೆನ್ನಟ್ಟಿ ಹೋಗಿ ಕನ್ನಡದ ಈ ಹುಡುಗಿಯರೂ ಸಾಧನೆಯ ಶಿಖರವೇರಿದ್ದಾರೆ. ಹಾಗೆ ನೋಡಿದರೆ ನೆರೆಯ ಕೇರಳವೂ ಕ್ರೀಡಾಪಟುಗಳ ಉತ್ಕರ್ಷಕ್ಕೆ ಬೇಕಾದ ಎಲ್ಲ ಸೌಲಭ್ಯಗಳನ್ನೂ ಒದಗಿಸುತ್ತಿದೆ. ಕರ್ನಾಟಕದಲ್ಲಿ ಇಷ್ಟೊಂದು ಐಟಿ, ಬಿಟಿ ಉದ್ಯಮ ಸಂಸ್ಥೆಗಳಿದ್ದರೂ ಇಲ್ಲಿನ ಪ್ರತಿಭಾವಂತ ಕ್ರೀಡಾಪಟುಗಳಿಗೆ ಒಳ್ಳೆಯ ಉದ್ಯೋಗ ಒದಗಿಸಿ, ತರಬೇತಿಗೆ ಅವಕಾಶ ಮಾಡಿಕೊಡುವ ಮನಸ್ಸು ಮಾಡಿಲ್ಲ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕ್ರೀಡಾಪಟುಗಳಿಗೆ ಕೋಟಾ ಇಟ್ಟು ಅವರ ತರಬೇತಿಗೂ ಅವಕಾಶ ಕಲ್ಪಿಸುವಂತೆ, ರಾಜ್ಯದ ಪ್ರಮುಖ ಐಟಿ, ಬಿಟಿ ಕಂಪೆನಿಗಳು ಏಕೆ ಪ್ರಯತ್ನಿಸಬಾರದು? ಸದಾ ಖಾಸಗೀಕರಣದ ಬಗ್ಗೆ ಮಾತನಾಡುವ ರಾಜ್ಯ ಸರಕಾರ, ಈ ನಿಟ್ಟಿನಲ್ಲಿ ಉದ್ಯಮಗಳ ಮನ ಒಲಿಸುವ ಕೆಲಸವನ್ನಾದರೂ ಮಾಡಬಹುದು. ಏಷ್ಯನ್ ಗೇಮ್ಸ್‌ನ ಅಥ್ಲೆಟಿಕ್‌ನಲ್ಲಿ ಚಿನ್ನ ಗೆದ್ದ ಕನ್ನಡತಿ ಅಶ್ವಿನಿ ಹೇಳಿದಂತೆ, ಗ್ರಾಮೀಣ ಪ್ರದೇಶದಲ್ಲಿ ಆರಂಭದ ಹಂತದಲ್ಲೇ ಒಳ್ಳೆಯ ಕೋಚ್‌ಗಳು ಸಿಕ್ಕಿದರೆ ಜಾಗತಿಕ ಮಟ್ಟದಲ್ಲಿಯೂ ನಮ್ಮ ಕ್ರೀಡಾಳುಗಳು ಅತ್ಯುತ್ತಮ ಸಾಧನೆ ನಡೆಸಬಹುದು.

■ ಬಿ.ಎಂ. ಹನೀಫ್

ಕಾಮನ್‌ವೆಲ್ತ್ ದೇಶಗಳ ಕ್ರೀಡಾಕೂಟದ ಪದಕಪಟ್ಟಿಯಲ್ಲಿ ಆಸ್ಟ್ರೇಲಿಯಾವನ್ನು ಬಿಟ್ಟರೆ ಭಾರತವೇ ಅತಿ ಹೆಚ್ಚು ಚಿನ್ನದ ಪದಕಗಳನ್ನು ಬಾಚಿಕೊಂಡಿದೆ. 38 ಚಿನ್ನಗಳನ್ನು ಗೆಲ್ಲುವ ಮೂಲಕ ಇಂಗ್ಲೆಂಡ್ ತಂಡವನ್ನೂ ಹಿಂದಿಕ್ಕಿದ ಭಾರತದ ಸಾಧನೆ ಗಮನಾರ್ಹವೇ ಸರಿ. ಹಾಗೆಯೇ ಏಷ್ಯನ್ ಕ್ರೀಡಾಕೂಟದಲ್ಲೂ ಭಾರತದ ಕ್ರೀಡಾಪಟುಗಳು, ಅತ್ಯಧಿಕ 556 ಪದಕಗಳನ್ನು ಕೊಳ್ಳೆ ಹೊಡೆಯುವ ಮೂಲಕ ಅಂತರರಾಷ್ಟ್ರೀಯ ಕ್ರೀಡಾರಂಗದಲ್ಲಿ ದೇಶದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ.

